# ಶ್ರೀಮಾತೆಯವರ ಪತ್ರಗಳು – ೯

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

### ಪತ್ರ – ೩೯

ಶ್ರೀ ಶ್ರೀ ದುರ್ಗೆಯ ಕೃಪೆ

೪.೧೦.೧೯೦೮

ಚಿರಂಜೀವಿಗೆ ,

ಪ್ರೀತಿಯ ಮಗು, ನಿನ್ನ ಪತ್ರ ಲಭಿಸಿ ಎಲ್ಲವನ್ನೂ ತಿಳಿದುಕೊಂಡೆ. ನಾವೆಲ್ಲರೂ ಚೆನ್ನಾಗಿದ್ದೇವೆ. ನೀನು ಪಾರ್ಸೆಲ್ ಮಾಡಿ ಕಳುಹಿಸಿರುವ ಸೀರೆ ಸಿಕ್ಕಿತು. ನೀನು ನನ್ನ ಆಶೀರ್ವಾದ ತೆಗೆದುಕೊ, ಹಾಗೂ ಎಲ್ಲರಿಗೂ ಆಶೀರ್ವಾದ ತಿಳಿಸು.

ಇತಿ ೧೪ನೇ ಫಾಲ್ಗುಣ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Ramakrishnanandaji,*
*Sri Ramakrishna Mission*
*Mylapore, Madras*

### ಪತ್ರ – ೪೦

ಶ್ರೀ ಶ್ರೀ ಕಾಳೀಮಾತೆಯ ಕೃಪೆ

೩೧.೧೦.೧೯೦೮

ಪ್ರೀತಿಯ ಮಗೂ,

ನನಗೆ ನಿನ್ನ (ಪತ್ರ) ತಲುಪಿ, (ನಾನು) ತುಂಬಾ ಸಂತೋಷಪಟ್ಟೆ. ಮಗೂ, ನನಗೆ ಆಗ್ರಹಾಯಣ ಮಾಸದಲ್ಲಿ ಹೋಗಲು ಸಾಧ್ಯವೋ (ಇಲ್ಲವೋ)ಎಂಬುದು ಏನೂ ಗೊತ್ತಿಲ್ಲ. ಆದರೆ ಎಲ್ಲವೂ ಅವನ ಇಚ್ಛೆ. ೫ ರೂಪಾಯಿ ತಲುಪಿತು, ಅದು ಶ್ರೀ ಶ್ರೀ ಜಗದ್ಧಾತ್ರೀ ಮಾತೆಯ ಪೂಜೆಗೆ ಉಪಯೋಗವಾಯಿತು. ನನ್ನ ಆಶೀರ್ವಾದವನ್ನು ಸ್ವೀಕರಿಸು. ನನ್ನ ಭಕ್ತ ವೃಂದದವರಿಗೂ ತಿಳಿಸು.

ಇತಿ, ೧೩೧೫ನೇ ವರ್ಷ, ೧೪ನೇ ದಿನ, ಕಾರ್ತಿಕ.

ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಪ್ರೀತಿಯ*
*ಶ್ರೀ ನಿರ್ಮಲ ಚಂದ್ರ ಘೋಷ್ ಮಗನಿಗೆ*
*ಮೊ: ಕಲ್ಕತ್ತಾ. ೧೦೭ ನಂ. ಗ್ರೇ ಸ್ಟ್ರೀಟ್*
*Calcatta*

### ಪತ್ರ – ೪೧

ಓಂ ರಾಮಕೃಷ್ಣ ಜಯತಿ

೧೮.೧೧.೧೯೦೮

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ ,

ಪ್ರೀತಿಯ ಮಗೂ, ನಿನ್ನ ಪತ್ರವು ತಲುಪಿ ನಾನು ತುಂಬಾ ಆನಂದಿತಳಾದೆ. ಇಲ್ಲಿ ಮಳೆ, ಮೋಡ ಏನೂ ಇಲ್ಲ. ನಿನ್ನ ಮಿತ್ರರು ರಾಖಾಲ್ ಮಹಾರಾಜರನ್ನು ತುಂಬಾ ಆದರದಿಂದ ನೋಡಿಕೊಳ್ಳುತ್ತಿದ್ದಾರೆಂದು ಕೇಳಿ ನನಗೆ ಆನಂದವಾಯಿತು. ಕೃಷ್ಣಲಾಲ್ ಬಾಬುಗೆ, ಜಿತೇನ್‌ಗೆ, ನಿರಾದ್‌ಗೆ, ರುದ್ರಚೈತನ್ಯನಿಗೆ, ವಿಶುದ್ಧಾನಂದನಿಗೆ, ಜೋಗಿನ್‌ಗೆ, ಮತ್ತು ನಿನಗೆ ನನ್ನ ಆಶೀರ್ವಾದ. ಅಮೆರಿಕಾದಲ್ಲಿರುವ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆಂದು ಕೇಳಿ ನಾನು ನೆಮ್ಮದಿಯಿಂದ ಇದ್ದೇನೆ. ಸದ್ಯದಲ್ಲಿ ಶ್ರೀ ಶ್ರೀ ಠಾಕೂರರ ಮಠವು ಸಂಪೂರ್ಣವಾಗುವುದೆಂದು ಬರೆದಿರುವೆ. ಇದನ್ನು ಕೇಳಿ ಪರಮಾನಂದವಾಯಿತು. ರಾಖಾಲ್ ಮಹಾರಾಜರಿಂದ ಈ ಮಠವನ್ನು ಪ್ರತಿಷ್ಠೆ ಮಾಡಿಸುವ ಎಂದು ಬಯಸಿದ್ದೀರಿ, ಅದು ತುಂಬಾ ಚೆನ್ನಾಗಿದೆ. ನಾನು ಸದ್ಯ ಚೆನ್ನಾಗಿದ್ದೇನೆ. ಹಾಗೂ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ಈ ತಿಂಗಳಲ್ಲಿ ನಾನು ಕೊಲ್ಕತ್ತೆಗೆ ಹೋಗುವುದಿದೆ. ಆದರೆ ಏನಾಗುವುದೋ ಗೊತ್ತಿಲ್ಲ. ಅವನು ಹೇಗೆ ನಡೆಸುವನೋ ಅದುವೇ ನಡೆಯುವುದು. ಮತ್ತು ಸಿಸ್ಟರ್ ದೇವಮಾತಾಳಿಗೆ ನನ್ನ ನಮಸ್ಕಾರ ತಿಳಿಸಬೇಕು. ಉಳಿದ ಮಕ್ಕಳಿಗೆಲ್ಲಾ ನನ್ನ ಆಶೀರ್ವಾದ ತಿಳಿಸು.

ಇತಿ, ೧೩೧೫ನೇ ವರ್ಷ, ಅಗ್ರಹಾಯಣ ೮ನೇ ದಿನ

ದಿನ : ಗುರುವಾರ

ನಿನ್ನ ಸ್ನೇಹಮಯಿ ಮಾತೃದೇವಿ —

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Ramakrishnananda*
*Sri Ramakrishna Mission*
*Brodies' Road*
*Mylapore, Madras*

**ವಿವರಣೆ :** ಮದ್ರಾಸ್ ಮಠದ ಪ್ರತಿಷ್ಠಾಪನೆಯಯ ಬಗ್ಗೆ ಇಲ್ಲಿ ಹೇಳಲಾಗಿದೆ.

### ಪತ್ರ – ೪೨

ಓಂ ರಾಮಕೃಷ್ಣ ಶರಣಂ

೨೬.೧೨.೧೯೦೮

ಮಗೂ,

ನಿನ್ನ ಪತ್ರವನ್ನು ಕೇಳಿ ನನಗೆ ತುಂಬಾ ಸಮಾಧಾನವಾಯಿತು. ಮತ್ತೆ ಶ್ರೀಯುತ ರಾಖಾಲ್ ಮಹಾರಾಜ್ ಶ್ರೀ ರಾಮೇಶ್ವರನಿಗೆ ಚಿನ್ನದ ಬಿಲ್ವಪತ್ರೆ, ಬೆಳ್ಳಿಯ ಬಿಲ್ವಪತ್ರೆ, ಮತ್ತು ತಾಮ್ರದ ಬಿಲ್ವಪತ್ರೆ ಕೊಟ್ಟು ಶಿವನ ಆರಾಧನೆ ಮಾಡಿಸಿದ್ದಾರೆ (ಮಾಡಿಸಿದ್ದಾನೆ). ಅದೊಂದು ಸೌಭಾಗ್ಯದ ದಿನವಾಯಿತು. ಏನಾದರಾಗಲಿ ಎಲ್ಲವೂ ಅವನ ಇಚ್ಛೆಯಂತೆ ನಡೆಯುವುದು, ಅವನಲ್ಲದೆ ಇನ್ನೇನೂ ಇಲ್ಲ. ಆಮೇಲೆ ೧೨ ಜನ ಬ್ರಾಹ್ಮಣರಿಗೆ ಭೋಜನ ಕೊಡಿಸಿದ್ದಾರೆ (ಕೊಡಿಸಿದ್ದಾನೆ) ಇದು ಎಂತಹ ಸೌಭಾಗ್ಯದ ವಿಷಯ! ಏನೇನು

ಮಾಡಿಸಿದ್ದಾನೋ ಅವನ್ನೆಲ್ಲಾ ಕೇಳಿ ನನಗೆ ಅತ್ಯಂತ ಸಮಾಧಾನ ವಾಯಿತು. ಪರ್ವತವರ್ಧಿನಿಗೆ ನೈವೇದ್ಯ ಅರ್ಪಿಸಿದ್ದಾರೆ (ಅರ್ಪಿಸಿದ್ದಾನೆ), ಇದನ್ನು ನಾನು ಕೇಳಿ ಅತ್ಯಂತ ಸಂತುಷ್ಟಳಾದೆ. ವಿಶ್ವೇಶ್ವರ ಮತ್ತು ಅನ್ನಪೂರ್ಣ, ಅಲ್ಲದೆ ರಾಮೇಶ್ವರ ಮತ್ತು ಪರ್ವತ ವರ್ಧಿನಿಗೆ ತುಂಬಾ ಸಂಭ್ರಮದ ಪೂಜೆ ಸಲ್ಲಿಸಿದ್ದಾರೆ(ಸಲ್ಲಿಸಿದ್ದಾನೆ). ಇದನ್ನು ಕೇಳಿ ನನಗೆ ಅತ್ಯಂತ ಆನಂದವಾಯಿತು. (ನನಗೆ) ಕಳುಹಿಸಿರುವ ಭಸ್ಮ, ಮತ್ತು ಪರ್ವತ ವರ್ಧಿನಿಯ ಕುಂಕುಮ ಪ್ರಸಾದ ಮತ್ತು ಬಿಲ್ವಪತ್ರ ತಲುಪಿದೆ, ಅದನ್ನು ಸ್ವೀಕರಿಸಿದೆ. ಶ್ರೀ ರಾಖಾಲ್‌ನಿಗೆ, ಶ್ರೀ ಕೃಷ್ಣಲಾಲ್‌ನಿಗೆ, ನೀರದ್‌ನಿಗೆ, ಜಿತೇನ್‌ನಿಗೆ, ಮತ್ತು ರಾಮು ಎಂಬ ಹೆಸರಿನ ವೈಷ್ಣವ ಬಾಲಕನಿಗೆ ನನ್ನ ಆಶೀರ್ವಾದ (ನೀಡಬೇಕು) ಮತ್ತು ನೀನೂ ತೆಗೆದುಕೋ. ನಾನು ಚೆನ್ನಾಗಿದ್ದೇನೆ.

ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ, ನಿನ್ನ ಶುಭಾಕಾಂಕ್ಷಿ ಮಾತೃದೇವಿ

೧೦ನೇ ಪೌಷ, ಶುಕ್ರವಾರ

ನಮ್ಮ ಇಲ್ಲಿ ತುಂಬಾ ಚಳಿ ಶುರುವಾಗಿದೆಂದು ತಿಳಿ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*Swami Ramakrishnananada*
*Sri Ramakrishna Home*
*Brodies' Road, Mylapore, Madras*

**ಪತ್ರ - ೪೩**

ಶ್ರೀಶ್ರೀ ರಾಮಕೃಷ್ಣೋ ಜಯತೇ

೨೯.೧.೧೯೦೯

ಪರಮ ಶುಭಾಶೀರ್ವಾದವನ್ನು ತಿಳಿಸಿ, ವಿಶೇಷವೇನೆಂದರೆ,

ಶ್ರೀ ಸ್ವಾಮಿ ವಿವೇಕಾನಂದರ ಉತ್ಸವವು ಆಡಂಬರದಿಂದ ನಡೆಯಿತು ಎಂದು ಕೇಳಿ ಆನಂದವಾಯಿತು. ಮೈಸೂರು ರಾಜನ ಮಂತ್ರಿಗೆ ಮತ್ತು ನಾರಾಯಣ ಅಯ್ಯಂಗಾರನಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ಅವರಿಗೆ ಧರ್ಮದಲ್ಲಿ ಶ್ರದ್ಧೆಯುಂಟಾಗಲಿ. ನಾನು ಆ ಸಮಾಚಾರ ಕೇಳಿ ಸಂತುಷ್ಟಳಾದೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಇತಿ,

೧೪ನೇ ಮಾಘ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*The Swami Ramakrishnananada*
*Sri Ramakrishna Homes*
*Brodies'Road, Mylapore, Madras*

**ಪತ್ರ - ೪೪**

ಓಂ ರಾಮಕೃಷ್ಣ ಜಯತಿ

೧೬ - ೨ - ೧೯೦೯

ದೀರ್ಘಾಯುವಾಗು.

ಪರಮ ಶುಭಾಶೀರ್ವಾದಗಳನ್ನು ಮೊದಲು ತಿಳಿಸಿ, ಆಮೇಲೆ ವಿಶೇಷವೇನೆಂದರೆ,

ಪ್ರೀತಿಯ ಮಗೂ, ಇಂದು ಸರಿಯಾದ ಸಮಯಕ್ಕೆ ನಿನ್ನ ಒಂದು ಪತ್ರ ಲಭಿಸಿ, ಎಲ್ಲವನ್ನೂ ತಿಳಿದುಕೊಂಡೆ. ಮಗು, ಸಂಸಾರದ ಕೆಲಸ ಮಾಡುತ್ತಿರು ಮತ್ತು ಅವನ ಸ್ಮರಣೆ ಮಾಡುತ್ತಿರು. ಮಗೂ, ನೀನು ಚೆನ್ನಾಗಿ ಮಾನಸಿಕವಾಗಿ ಆನಂದದಿಂದಿರಬೇಕು. ಯಾವ ಚಿಂತೆಯನ್ನೂ ಮಾಡಬೇಡ. ಸದಾ ಆನಂದದಿಂದಿರು. ಮನಸ್ಸಿನಲ್ಲೇ (ಅವನನ್ನು) ಕರೆಯಬೇಕು. ಅಂತೆಯೇ ಅವನು ಯಾವಾಗಲೂ ನಿನ್ನನ್ನು ರಕ್ಷಿಸುವನು. ಓದುವುದರಲ್ಲಿ ಮನಸ್ಸು ಕೊಡು, ನನ್ನ ಆಶೀರ್ವಾದವನ್ನು ಸ್ವೀಕರಿಸು ಹಾಗೂ ಎಲ್ಲರಿಗೂ ತಿಳಿಸು. ನನ್ನ ಸಮಾಚಾರವನ್ನು ಅಮೂಲ್ಯನಿಗೆ ತಿಳಿಸು ಮತ್ತು ನನ್ನ ಆಶೀರ್ವಾದವನ್ನು ತಿಳಿಸು. ನಾನು ಚೆನಾಗಿದ್ದೇನೆ ಮತ್ತು ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ, ೧೩೧೫ನೇ ವರ್ಷ, ಫಾಲ್ಗುಣ ೩ನೇದಿನ, ಸೋಮವಾರ

ನಿನ್ನ ಮಾತೃದೇವಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಪರಮ ಪ್ರೀತಿಯ —*
*ಶ್ರೀಮಾನ್ ನಿಶಿಕುಮಾರ್ ಗಂಗೋಪಾಧ್ಯಾಯ*
ಮಗೂ, ದೀರ್ಘಾಯುವಾಗು
*ಡಾಕಾ ೭೯ ನಂ ದಿಗ್‌ಬಾಜಾರ್ ಛಾತ್ರ ಮೆಸ್*
*ಪೋ: Dhacca*

**ಪತ್ರ - ೪೫**

ಓಂ ರಾಮಕೃಷ್ಣ ಜಯತಿ

೨೧.೨.೧೯೦೯, ೧೩೧೫ನೇ ವರ್ಷ

ತಾರೀಕು ೮ನೇ ಫಾಲ್ಗುಣ

ಪ್ರೀತಿಯ ಮಗೂ,


ಇಂದು ನೀನು ಕಳುಹಿಸಿರುವ ಒಂದು ಜೋಡಿ ಸೀರೆಗಳು ಸಿಕ್ಕಿದವು ಮತ್ತು ಕೆಲವು ಪೋಸ್ಟ್ ಕಾರ್ಡುಗಳು ಸಿಕ್ಕಿದವು. ಎರಡೂ ಸೀರೆಗಳು ತುಂಬಾ ಚೆನ್ನಾಗಿವೆ. ನೋಡಿ ನನಗೆ ಬಹಳ ಆನಂದ ವಾಯಿತು. ಏನಾದರಾಗಲಿ, ನನ್ನ ಸೌಕರ್ಯದಂತೆ ಸೀರೆಗಳನ್ನು ಉಪಯೋಗಿಸುವೆ. ಮತ್ತೆ ೮ ಪೋಸ್ಟ್ ಕಾರ್ಡುಗಳು ಆ ಸೀರೆಗಳ ಒಳಗೇ ಇದ್ದವು - ಅವು ತಲುಪಿದವು. ಪ್ರೀತಿಯ ಮಗು, ನೀನು ನನ್ನ ಆಶೀರ್ವಾದವನ್ನು ಸ್ವೀಕರಿಸು. ಹಾಗೂ ಭಕ್ತವೃಂದದವರಿಗೂ ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ ಮತ್ತು ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ನಿನ್ನ ಮಂಗಳಮಯಿ

ಮಾತೃದೇವಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಪರಮ ಪ್ರೀತಿಯ*
*ಶ್ರೀಮಾನ್ ನಿರ್ಮಲ ಚಂದ್ರದಾಸ್ ಘೋಷ್*
ಪ್ರೀತಿಯ ಮಗೂ, ದೀರ್ಘಕಾಲ ಸುರಕ್ಷಿತವಾಗಿರು
*ಕಲ್ಕತ್ತಾ ಗ್ರೇ ಸ್ಟ್ರೀಟ್ ನಂ ೧೦೭,*
*ಪೋಸ್ಟ್: ಶ್ರೀ ಕುಮಾರ್ ಕುಮಾರ್ ಕೃಷ್ಣ ಬಾಹಾದೂರ್*
*ಅವರ ಮನೆ, Cal*

## ಯುವಚೇತನ



# ಭಾರತೀಯ ಜೀವನ ಮತ್ತು ವೇದಾಂತ

ಭರತಖಂಡದಲ್ಲಿ ಇರುವ ನಮಗೆ ಏನು ಬೇಕಾಗಿದೆ? ಹೊರಗಿನವರಿಗೆ ಈ ಭಾವನೆಗಳು ಆವಶ್ಯಕವಾಗಿದ್ದರೆ ನಮಗೆ ಇವು ಇಪ್ಪತ್ತರಷ್ಟು ಆವಶ್ಯಕವಿದೆ. ಏಕೆಂದರೆ ಉಪನಿಷತ್ತು ಎಷ್ಟೇ ಶ್ರೇಷ್ಠವಾಗಿದ್ದರೂ, ನಮ್ಮ ಪೂರ್ವಿಕರು ಕೀರ್ತಿಶೇಷರಾದ ಮಹಾಋಷಿಗಳಾಗಿದ್ದರೂ, ಇತರ ಅನೇಕ ಜನಾಂಗಗಳೊಂದಿಗೆ ಹೋಲಿಸಿದರೆ ನಾವು ದುರ್ಬಲರು, ಅತಿ ದುರ್ಬಲರಾಗಿರುವೆವು. ಮೊದಲು ನಮ್ಮ ಶಾರೀರಿಕ ದೌರ್ಬಲ್ಯ. ಈ ಶಾರೀರಿಕ ದೌರ್ಬಲ್ಯವೇ ನಮ್ಮ ಕಷ್ಟದ ಮೂರನೆಯ ಒಂದು ಪಾಲಿಗಾದರೂ ಕಾರಣ. ನಾವು ಶುದ್ಧ ಸೋಮಾರಿಗಳು, ಕೆಲಸ ಮಾಡುವುದಿಲ್ಲ, ನಮ್ಮಲ್ಲಿ ಒಗ್ಗಟ್ಟಿಲ್ಲ. ಅನ್ಯರನ್ನು ಪ್ರೀತಿಸುವುದಿಲ್ಲ; ನಾವು ಬರಿಯ ಸ್ವಾರ್ಥಿಗಳು. ಪರಸ್ಪರರನ್ನು ದ್ವೇಷಿಸದೆ, ಅಸೂಯೆಪಡದೆ ಮೂರು ಜನರು ಕೂಡ ಒಟ್ಟಿಗೆ ಕಲೆಯಲಾರೆವು. ಇದೇ ನಮ್ಮ ಸ್ಥಿತಿ; ನಾವು ಚೆಲ್ಲಾಪಿಲ್ಲಿಯಾಗಿರುವ ದೊಂಬಿಯಂತೆ ಇರುವೆವು, ಅತ್ಯಂತ ಸ್ವಾರ್ಥಿಗಳಾಗಿರುವೆವು. ಹಣೆಯ ಮೇಲೆ ಮತ ಚಿಹ್ನೆಯನ್ನು ಹೀಗೆ ಇಡಬೇಕೆ, ಹಾಗೆ ಇಡಬೇಕೆ ಎಂದು ಬೇಕಾದಷ್ಟು ಹೋರಾಟವಾಗಿದೆ. ಒಬ್ಬನ ದೃಷ್ಟಿ ನನ್ನ ಆಹಾರವನ್ನು ಅಶುದ್ಧ ಮಾಡುವುದೆ ಇಲ್ಲವೆ ಎಂಬ ಗಹನ ವಿಷಯದ ಮೇಲೆ ಬೇಕಾದಷ್ಟು ಗ್ರಂಥಗಳನ್ನು ಬರೆದಿರುವರು! ಹಲವು ಶತಮಾನಗಳಿಂದ ಇದರಲ್ಲೇ ನಾವು ನಿರತರಾಗಿರುವೆವು.ಇಂತಹ ಅದ್ಭುತ ಅನ್ವೇಷಣೆಯಲ್ಲಿ ತಮ್ಮ ಪೂರ್ಣ ಮಾನಸಿಕ ಶಕ್ತಿಯನ್ನೆಲ್ಲಾ ವ್ಯರ್ಥಗೊಳಿಸಿದ ಜನಾಂಗದಿಂದ ಯಾವುದೇ ಉತ್ತಮವಾದುದನ್ನೂ ನಿರೀಕ್ಷಿಸಲಾರೆವು.. ಇದಕ್ಕೆ ಕಾರಣವೇನು? ಶಾರೀರಿಕ ದುರ್ಬಲತೆ. ಇಂತಹ ದುರ್ಬಲ ಮಿದುಳು ಏನನ್ನೂ ಸಾಧಿಸಲಾರದು. ನಾವು ಅದನ್ನು ಪುಷ್ಟಿಗೊಳಿಸಬೇಕು. ಮೊದಲು ನಮ್ಮ ಯುವಕರು ಬಲಿಷ್ಠರಾಗಬೇಕು. ಅನಂತರ ಧರ್ಮ. ನನ್ನ ತರುಣ ಸ್ನೇಹಿತರೇ, **ಮೊದಲು ಬಲಿಷ್ಠರಾಗಿ.** ಇದು ನನ್ನ ಬುದ್ಧಿವಾದ. ಗೀತಾಧ್ಯಯನಕ್ಕಿಂತ ಫುಟಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ. ಇವು ಕೆಚ್ಚಿನ ಮಾತುಗಳು. ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮ ನ್ಯೂನತೆ ನನಗೆ ಗೊತ್ತಿದೆ. ನನಗೆ ಸ್ವಲ್ಪ ಅನುಭವವಾಗಿದೆ. ನಿಮ್ಮ ಬಾಹುಗಳ ಮಾಂಸಖಂಡದಲ್ಲಿ ಸ್ವಲ್ಪ ಹೆಚ್ಚು ಶಕ್ತಿ ಇದ್ದರೆ, ನೀವು ಗೀತೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ. ನಿಮ್ಮಲ್ಲಿ ಹೆಚ್ಚು ಬಿಸಿ ರಕ್ತವಿದ್ದರೆ ಗೀತೆಯಲ್ಲಿ ಕೃಷ್ಣನ ಪ್ರತಿಭೆ ಮತ್ತು ಅದ್ಭುತ ಶಕ್ತಿ ಇವನ್ನು ತಿಳಿದುಕೊಳ್ಳಬಲ್ಲಿರಿ. ನಿಮ್ಮ ಕಾಲಿನ ಮೇಲೆ ನಿಮ್ಮ ದೇಹ ದೃಢವಾಗಿ ನಿಂತು, ನಿಮ್ಮನ್ನು ನೀವು ಪುರುಷರೆಂದು ಪರಿಗಣಿಸಿದಾಗ ಉಪನಿಷತ್ತಿನ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ, ಆತ್ಮನ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ. ಹೀಗೆ ನಾವು ಉಪನಿಷತ್ತಿನ ಭಾವನೆಗಳನ್ನು ನಮ್ಮ ಆವಶ್ಯಕತೆಗೆ ತಕ್ಕಂತೆ ಅನುಷ್ಠಾನಕ್ಕೆ ತರಬಹುದು. *(ಕೃತಿಶ್ರೇಣಿ, ಸಂ.೩, ಪು.೧೯-೨೦)*



ಸಹನೆಯ ಗುಣಕ್ಕಿಂತ ಮೇಲಾದುದಿಲ್ಲ. ಅದನ್ನು ಎಲ್ಲರೂ ಅಭ್ಯಾಸ ಮಾಡಬೇಕು. ಭಾರವಾದ ಸುತ್ತಿಗೆಯಿಂದ ಎಷ್ಟು ಪೆಟ್ಟು ಕೊಟ್ಟರೂ ಅಕ್ಕಸಾಲಿಗನ ಅಡಿಗಲ್ಲು ಅಚಲವಾಗಿ ನಿಂತಿರುವುದು. ಇದರಂತೆಯೇ, ಪ್ರತಿಯೊಬ್ಬರೂ ಯಾರು ಏನೇ ಮಾಡಲಿ ಅಥವಾ ಹೇಳಲಿ, ಸ್ಥಿರಚಿತ್ತದಿಂದ ಅನುಭವಿಸಬೇಕು.

— ಶ್ರೀರಾಮಕೃಷ್ಣರು



ಪೂಜೆ, ಜಪ, ಧ್ಯಾನ ಇವನ್ನೆಲ್ಲ ಮಾಡಬೇಕು. ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಇದ್ದರೆ ಅದರ ಸುವಾಸನೆ ಹೇಗೆ ಹೊರಗೆ ಬರುವುದೋ, ಹಾಗೇ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ಕ್ರಮೇಣ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಲೋಚನೆಗಳೆಲ್ಲ ನಾಶವಾದ ಕ್ಷಣವೇ ಸಾಕ್ಷಾತ್ಕಾರವುಂಟಾಗುವುದು.

— ಶ್ರೀಮಾತೆ ಶಾರದಾದೇವಿ



ಯಾವುದು ನಿಮ್ಮನ್ನು ದೈಹಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ದುರ್ಬಲರನ್ನಾಗಿ ಮಾಡುವುದೋ ಅದನ್ನು ವಿಷದಂತೆ ತ್ಯಜಿಸಿ. ಅದರಲ್ಲಿ ಜೀವವಿಲ್ಲ. ಅದು ಸತ್ಯವಾಗಿರಲಾರದು. ಸತ್ಯವು ಶಕ್ತಿವರ್ಧಕ, ಪರಿಶುದ್ಧ. ಸತ್ಯವೇ ಅನಂತ ಜ್ಞಾನ. ಸತ್ಯವು ಶಕ್ತಿ ಕೊಡಬೇಕು, ಬೆಳಕು ಕೊಡಬೇಕು, ಸ್ಫೂರ್ತಿ ಕೊಡಬೇಕು.

— ಸ್ವಾಮಿ ವಿವೇಕಾನಂದ